# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570 006.

ಸಂಖ್ಯೆ : ಕರಾಮುವಿ/ಅಸಾವಿ/01-26/2020-21 ದಿನಾಂಕ: 30.01.2021

## ದರಪಟ್ಟಿ ಆಹ್ವಾನದ ಬಗೆಗೆ

ವಿಷಯ: ವಿವಿಧ ಶಿಕ್ಷಣಕ್ರಮಗಳ ಕೊರತೆಯಾಗಿರುವ ಅಧ್ಯಯನ ಸಾಮಗ್ರಿಗಳನ್ನು ಡಿಜಿಟಲ್ ಪ್ರಿಂಟಂಗ್ ಹಾಗು ಬೈಂಡಿಂಗ್ ಮಾಡಿ ಸರಬರಾಜು ಮಾಡುವ ಸಂಬಂಧ ದರಪಟ್ಟಿಕೋರಿ.

ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:30-01-2021

.........

ಕರಾಮುವಿಯ ವಿವಿಧ ಶಿಕ್ಷಣಕ್ರಮಗಳ ಕೊರತೆಯಾಗಿರುವ ಅಧ್ಯಯನ ಸಾಮಗ್ರಿಗಳನ್ನು ಡಿಜಿಟಲ್ ಪ್ರಿಂಟಿಂಗ್ ಹಾಗು ಬೈಂಡಿಂಗ್ ಮಾಡಿ ಸರಬರಾಜು ಮಾಡಿಕೊಳ್ಳಬೇಕಾಗಿದ್ದು ಇದಕ್ಕೆ ಸಂಬಂಧಿಸಿದಂತೆ Specification ಹಾಗು ನಿಯಮ ಮತ್ತು ಷರತ್ತುಗಳು ಈ ಕೆಳಕಂಡಂತಿವೆ. ಸದರಿ ಅಧ್ಯಯನ ಸಾಮಗ್ರಿಗಳನ್ನು ಡಿಜಿಟಲ್ ಪ್ರಿಂಟ್ ಹಾಗು ಬೈಂಡಿಂಗ್ ಮಾಡಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಸ್ವಂತ ಖರ್ಚಿನಲ್ಲಿ ಸರಬರಾಜು ಮಾಡಲು ತಗಲುವ ಕನಿಷ್ಠತಮ ದರವನ್ನು (ಎಲ್ಲಾ ತೆರಿಗೆಗಳು ಸೇರಿದಂತೆ) ದರಪಟ್ಟಿಯ ಮೂಲಕ ಸಲ್ಲಿಸಲು ಕೋರಲಾಗಿದೆ.

**Specification:**

- ಒಳಪುಟಗಳನ್ನು 75 GSM 'A' Grade Maplitho Paper ಉಪಯೋಗಿಸಿ ಒಂದು ಬಣ್ಣದಲ್ಲಿ ಡಿಜಿಟಲ್ ಪ್ರಿಂಟ್ ಮಾಡಬೇಕಾಗಿರುತ್ತದೆ.
- ರಕ್ಷಾಪುಟಗಳನ್ನು 220 GSM Indian Matt Art Card (ಬಹುವರ್ಣದಲ್ಲಿ ಮುದ್ರಿಸಿ) with UV Coating/Lamination and perfect binding ಮಾಡಬೇಕಾಗಿರುತ್ತದೆ.

ನಿಯಮ ಮತ್ತು ಷರತ್ತುಗಳು:

1. ಮುದ್ರಣಕ್ಕೆ ಸಂಬಂಧಿಸಿದ ಅಧ್ಯಯನ ಸಾಮಗ್ರಿಗಳ ಡೆಮಿಯನ್ನು ಕಾರ್ಯಾದೇಶದೊಂದಿಗೆ ವಿವಿ ನಿಲಯವೇ ನೀಡುತ್ತದೆ. ಯಾವುದೇ ಬದಲಾವಣೆ ಇಲ್ಲದಂತೆ ಅಚ್ಚುಕಟ್ಟಾಗಿ ಡಿಜಿಟಲ್ ಪ್ರಿಂಟ್ ಹಾಗು ಬೈಂಡಿಂಗ್ ಮಾಡಿ ಸರಬರಾಜು ಮಾಡಬೇಕಾಗುತ್ತದೆ.
2. ವಿವಿಧ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳನ್ನು ಮೇಲಿನ ಸ್ಪೆಸಿಫಿಕೇಷನ್‌ಂತೆ ಡಿಜಿಟಲ್ ಪ್ರಿಂಟ್ ಹಾಗು ಬೈಂಡಿಂಗ್‌ನೊಂದಿಗೆ ಸಿದ್ಧಪಡಿಸಿ ಸರಬರಾಜು ಮಾಡಲು ಒಟ್ಟಾರೆ ಅಂದಾಜು **19562** ಪುಟಗಳಿದ್ದು, ಈ ರೀತಿಯಲ್ಲಿ ಡಿಜಿಟಲ್ ಪ್ರಿಂಟ್ ಮಾಡಲು.
   (I) ಒಳಪುಟಗಳ ಡಿಜಿಟಲ್ ಪ್ರಿಂಟ್ (ಒಂದು ಬಣ್ಣದಲ್ಲಿ) ಮುದ್ರಿಸಲು ಒಂದು ಪುಟಕ್ಕೆ ತಗುಲುವ ದರ.
   (II) 04 ಪುಟದ ರಕ್ಷಾಪುಟಕ್ಕೆ (ಬಹುವರ್ಣದಲ್ಲಿ) ಮತ್ತು ಬೈಂಡಿಂಗ್ ಮಾಡಲು ತಗುಲುವ ದರ.
   (III) 04 ಪುಟದ ರಕ್ಷಾಪುಟಕ್ಕೆ (ಎರಡು ಬಣ್ಣದಲ್ಲಿ) ಮುದ್ರಿಸಲು ತಗಲುವ ದರ.
3. ಮೇಲಿನ ದರಗಳನ್ನು ಪ್ರತ್ಯೇಕ - ಪ್ರತ್ಯೇಕವಾಗಿ ಕನಿಷ್ಠ ದರವನ್ನು (ಎಲ್ಲಾ ತೆರಿಗೆ ಸೇರಿದಂತೆ) ಸೂಚಿಸುವುದು. ಈ ಪುಸ್ತಕಗಳ ಮುದ್ರಣಕ್ಕೆ ನಿಗದಿಪಡಿಸಿರುವ ದರಗಳು ಇದೇ ವಿಷಯವಾಗಿ ಮತ್ತೊಮ್ಮೆ ದರಪಟ್ಟಿಯನ್ನು ಕರೆಯುವವರೆಗೆ ಚಾಲ್ತಿಯಲ್ಲಿರುತ್ತದೆ.
4. ಒಮ್ಮೆ ದರಪಟ್ಟಿ ಸಲ್ಲಿಸಿ ಕನಿಷ್ಠತಮದರ ನಿಗದಿಯಾದ ನಂತರ ಸಿದ್ಧಪಡಿಸಲು ಸಬೂಬು ನೀಡಿದರೆ ಕಾನೂನು ರೀತ್ಯಾಕ್ರಮ ಕೈಗೊಳ್ಳಲಾಗುತ್ತದೆ.
5. ವಿ ವಿ ಯಲ್ಲಿ **GST** ನೊಂದಣಿದಾರರಿಗೆ ಮಾತ್ರ ಮುದ್ರಣದ ಕೆಲಸ ನಿರ್ವಹಿಸಲು ಅವಕಾಶವಿದ್ದು **GST** ನೊಂದಣಿದಾರರು ಮಾತ್ರ ದರಪಟ್ಟಿ ಸಲ್ಲಿಸುವುದು. ತಪ್ಪಿದ್ದಲ್ಲಿ ದರಪಟ್ಟಿಯನ್ನು ತಿರಸ್ಕರಿಸಲಾಗುವುದು.
6. ಸದರಿ ದರಪಟ್ಟಿಯನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ವಿ.ವಿ.ಯು ಹೊಂದಿರುತ್ತದೆ.
7. ದರಪಟ್ಟಿಯನ್ನು ಮೊಹರಾದ ಲಕೋಟೆಯಲ್ಲಿಟ್ಟು "ವಿವಿಧ ಶಿಕ್ಷಣ ಕ್ರಮಗಳ ಕೊರತೆಯಿರುವ ಅಧ್ಯಯನ ಸಾಮಗ್ರಿಗಳನ್ನು ಡಿಜಿಟಲ್ ಪ್ರಿಂಟಂಗ್ ಹಾಗು ಬೈಂಡಿಂಗ್ ಮಾಡುವ ಸಂಬಂಧದ ದರಪಟ್ಟಿ" ಎಂಬುದಾಗಿ ಶೀರ್ಷಿಕೆಯನ್ನು ಬರೆದು ದಿನಾಂಕ8/2/21 ಸಂಜೆ: 5:00 ಗಂಟೆಯೊಳಗೆ ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಇವರ ಹೆಸರಿಗೆ ಖುದ್ದಾಗಿ/ ಅಂಚೆ ಮುಖಾಂತರ ಸಲ್ಲಿಸುವುದು. ಅಂಚೆ ವಿಳಂಬಕ್ಕೆ ವಿಶ್ವವಿದ್ಯಾನಿಲಯ ಹೊಣೆಯಾಗಿರುವುದಿಲ್ಲ.

ಆದೇಶದ ಮೇರೆಗೆ

ಕುಲಸಚಿವರು

ಪ್ರತಿಗಳು:

1. ವಿಶೇಷ ಕರ್ತವ್ಯಾಧಿಕಾರಿಗಳು ಕುಲಪತಿಗಳ ಆಪ್ತಶಾಖೆ, ಕರಾಮುವಿ, ಮೈಸೂರು.
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
3. ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು.
4. ನಿರ್ದೇಶಕರು, ಐಟಿ ವಿಭಾಗ, ಕರಾಮುವಿ, ಮೈಸೂರು-ಸದರಿ ದರಪಟ್ಟಿಯನ್ನು ವಿ.ವಿ.ನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
5. ಕಚೇರಿ ಪ್ರತಿ.

Scanned by CamScanner

Scanned with CamScanner